ಸೃಜನಿ

**SRUJANI: Indian Journal of Innovative Research and Development (SIJIRD)**
Volume-4 Issue 1, March-April 2025, Pp. 100-105
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಶೈವ ಪರಂಪರೆಯಲ್ಲಿ ಲಿಂಗ

**ಡಾ. ಮಧುಸೂದನ್ ಸಿ. ಆರ್.**
ಕನ್ನಡ ಸಹಾಯಕ ಪ್ರಾಧ್ಯಾಪಕರು, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ, ಮೈಸೂರು

**Abstract:**
*ಸನಾತನ ಸಂಸ್ಕೃತಿಯಲ್ಲಿ ಮೂರ್ತಿಪೂಜೆಯು ಅವರ ಧಾರ್ಮಿಕ ಆಚರಣೆಯ ಅವಿಭಾಜ್ಯ ಅಂಗವೆಂದೇ ಹೇಳಬಹುದು. ಇದರ ಒಂದು ಭಾಗವಾಗಿ ಬೆಳೆದು ಬಂದ ಶೈವಧರ್ಮ ಕೂಡ ಅನಾದಿ ಕಾಲದಿಂದಲೂ ದೇವಾಲಯಗಳನ್ನು ನಿರ್ಮಿಸಿ ಅದರೊಳಗೆ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಪೂಜಿಸುತ್ತಾ ಬಂದಿರುವುದನ್ನು ಕಾಣಬಹುದಾಗಿದೆ. ಪ್ರಾಗ್ಜಾರಿತ್ರಿಕ ಯುಗದ ಪ್ರಾರಂಭದಲ್ಲಿ ಮೂಡಿಬಂದ ಚಿತ್ರ ಮತ್ತು ಶಿಲ್ಪಗಳು ಕೇವಲ ದೇವರನ್ನು ಪ್ರತಿನಿಧಿಸುವ ವಸ್ತುಗಳಾಗಿರದೆ, ಮಾನವನ ಕಲಾವಂತಿಕೆಯನ್ನು ಪ್ರತಿಬಿಂಬಿಸುವ ಸಂಕೇತಗಳಾಗಿ ರೂಪುತಳೆದಿವೆ. ನಂತರದಲ್ಲಿ ಮಾನವನ ತಾತ್ತ್ವಿಕ ಕಲ್ಪನೆಗಳಿಗೆ ಶಾಬ್ದಿಕ ರೂಪವನ್ನು ದೊರಕಿಸಿ ಅವು ದೇವತಾಮೂರ್ತಿಗಳಾಗಿ ಮೈತಳೆದುನಿಂತಿವೆ. ಪ್ರಸ್ತುತ ಲೇಖನದಲ್ಲಿ ಶೈವ ಪರಂಪರೆಯಲ್ಲಿ ಲಿಂಗ ಪರಂಪರೆಯನ್ನು ಕುರಿತು ಅಧ್ಯಯನ ಮಾಡಲಾಗಿದೆ.*

**Keywords:** *ಕನ್ನಡ ಸಾಹಿತ್ಯ, ಧಾರ್ಮಿಕ ಪಂಥಗಳು, ಶೈವ ಪರಂಪರೆ, ಮೂರ್ತಿಪೂಜೆ, ಮೂರ್ತಿಶಿಲ್ಪ.*

**ಪೀಠಿಕೆ**

ಭಾರತೀಯ ಶಿಲ್ಪಗಳು ಕೇವಲ ಸೌಂದರ್ಯೋಪಾಸನೆಯ ಪ್ರತೀಕಗಳಾಗಿ ರೂಪುತಳೆಯದೆ, ಆಯಾ ಕಾಲದ ಸಾಮಾಜಿಕ ಮತ್ತು ಧಾರ್ಮಿಕ ಆಶಯಗಳಿಗೆ ಹಿಡಿದ ಕನ್ನಡಿಗಳಂತಿವೆ. ಹಾಗಾಗಿ ದೇವತಾಮೂರ್ತಿಗಳನ್ನು ರಚಿಸುವ ಕುರಿತಾಗಿ ನಿರ್ದಿಷ್ಟವಾದ ನೀತಿ ನಿಯಮಗಳನ್ನು ಅನೇಕ ಗ್ರಂಥಗಳು ರೂಪಿಸಿವೆ. ಇವುಗಳಲ್ಲಿ ಕ್ರಿ.ಶ. 6ನೆಯ ಶತಮಾನದಲ್ಲಿ ರಚಿತವಾಗಿರುವ ಅದ್ಭುತಬ್ರಾಹ್ಮಣ, ಷಡ್ವಂಶಬ್ರಾಹ್ಮಣ, ಪಂಚವಿಂಶತಿಬ್ರಾಹ್ಮಣ ಮುಂತಾದವು ಪ್ರಮುಖವಾಗಿವೆ.

ಶಿವ ದೇವಾಲಯಗಳು ಭಾರತದಾದ್ಯಂತ ಮಾತ್ರವಲ್ಲದೆ ನೆರೆಯ ದೇಶಗಳಲ್ಲಿಯೂ ಸ್ಥಾಪನೆಗೊಂಡು ಜಗದ್ವಿಖ್ಯಾತವಾಗಿವೆ. ಭಾರತೀಯರ ಆದಿ ಮಹಾಕಾವ್ಯವಾದ ರಾಮಾಯಣದಲ್ಲಿ ಲಂಕೆಯಲ್ಲಿನ ದೇವಾಲಯಗಳಲ್ಲಿ ಶಿವ ದೇವತಾಮೂರ್ತಿಗಳಿದ್ದ ಬಗ್ಗೆ ಉಲ್ಲೇಖವಿದೆ ಎಂದು ವಿದ್ವಾಂಸರಾದ ಶ್ರೀಯುತ ಗೋಪಿನಾಥರಾವ್ ಟಿ.ಎ. ಅವರು ಅಭಿಪ್ರಾಯಪಟ್ಟಿದ್ದಾರೆ.[1] ಹಾಗೆಯೇ ದಕ್ಷಿಣ ಭಾರತದಲ್ಲಿ ಮೂರ್ತಿಶಿಲ್ಪಗಳು ಮತ್ತು ದೇವಾಲಯಗಳ ಅಸ್ತಿತ್ವವನ್ನು ಕ್ರಿಸ್ತಪೂರ್ವದಲ್ಲಿಯೇ ಕಾಣಬಹುದಾಗಿದೆ. ಕ್ರಿ.ಪೂ. 2 ನೆಯ ಶತಮಾನದ ಪತಂಜಲಿಯ ಯೋಗ ಸ್ತೋತ್ರದಲ್ಲಿ ದೇವರು ಮತ್ತು

***Please cite this article as:*** ಮಧುಸೂದನ್, ಸಿ.ಆರ್. (2025). ಶೈವ ಪರಂಪರೆಯಲ್ಲಿ ಲಿಂಗ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 4(1), 100–105

ದೇವಶಿಲ್ಪಗಳ ಬಗೆಗೆ ಉಲ್ಲೇಖವಿದೆ. ಹೀಗೆ ಪ್ರತಿಷ್ಠಾಪನೆಗೊಂಡ ಶಿವಾಲಯಗಳಲ್ಲಿ ಶಿವಲಿಂಗ, ಅರ್ಧನಾರೀಶ್ವರ, ನಂದಿ, ತ್ರೈಪುರುಷ, ಕಾಲಭೈರವಮೂರ್ತಿ, ದಕ್ಷಿಣಾಮೂರ್ತಿ, ಚಂಡಿಕೇಶ್ವರ, ಗಣಪತಿ, ಸೂರ್ಯ, ಮಹಿಷಾಸುರಮರ್ಧಿನಿ, ಸಪ್ತಮಾತೃಕೆಯರು, ದುರ್ಗೆ, ಯೋಗಿನಿ, ವೀರಭದ್ರ, ಪಶುಪತಿ, ನಟರಾಜ ಇತ್ಯಾದಿ ಮೂರ್ತಿಗಳನ್ನು ಪ್ರಮುಖವಾಗಿ ಕಾಣಬಹುದು. ಇವುಗಳಲ್ಲಿ ಶೈವರು ಪೂಜಿಸುವ ಮೂರ್ತಿಗಳಲ್ಲಿ ಶಿವಲಿಂಗವು ಪ್ರಮುಖವಾದುದಾಗಿದೆ.

ಸಮಗ್ರ ಭಾರತೀಯ ಸಂಸ್ಕೃತಿಯ ಮೂಲವನ್ನು ಅನೇಕ ವಿದ್ವಾಂಸರು ಹರಪ್ಪ ಸಂಸ್ಕೃತಿಯಲ್ಲಿಯೇ (ಕ್ರಿ.ಪೂ.2350–1750) ಕಾಣುವ ಪ್ರಯತ್ನವನ್ನು ಮಾಡಿದ್ದಾರೆ. ಹಾಗೆಯೇ ಕೆಲ ವಿದ್ವಾಂಸರು 'ಲಿಂಗಗಳ ಹುಟ್ಟೂ ಸಹ ಹರಪ್ಪಾ ಸಂಸ್ಕೃತಿಯ ಶ್ರೀಮಂತ ಪರಿಸರದಿಂದಲೇ ಮೂಡಿಬಂದಿದೆ' ಎಂದು ಪುರಾತತ್ತ್ವ ಆಧಾರಗಳ ಮೇಲೆ ಗುರುತಿಸಲು ಪ್ರಯತ್ನಿಸಿದ್ದಾರೆ. ಅಲ್ಲದೆ ಇಂದಿನ ಲಿಂಗಾಕಾರವನ್ನು ಹೋಲುವ ಮಣ್ಣಿನ ಆಕೃತಿಗಳು ಹರಪ್ಪಾ ಸಂಸ್ಕೃತಿಯಲ್ಲಿ ಹೇರಳವಾಗಿ ದೊರೆತಿರುವುದಾಗಿ ಸರ್ ಜಾನ್ ಮಾರ್ಷಲ್ ಅವರು ಹೇಳುತ್ತಾ, 'ಹರಪ್ಪಾದಲ್ಲಿನ ಈ ಲಿಂಗಾಕಾರಗಳು ದೇಹದಲ್ಲಿ ಧರಿಸಲು (ಇಷ್ಟಲಿಂಗಗಳಂತೆ) ಬಳಸಲ್ಪಡುತ್ತಿರಬೇಕು' ಎಂದು ಊಹಿಸಿದ್ದಾರೆ. ಪಂಜಾಬ್‌ನ ಸಂಘೋಲ್‌ನ ಉತ್ಖನನದಲ್ಲಿ ಬಹುಪಾಲು ಲಿಂಗವನ್ನೇ ಹೋಲುವ (ಕ್ರಿ.ಪೂ. 1900) ಶಿಲ್ಪವೊಂದು ಪೀಠದೊಂದಿಗೆ ದೊರೆತಿದ್ದು, ಇದು ಲಿಂಗದ ಪ್ರಾಚೀನತೆಯ ಬಗೆಗೆ ಮತ್ತಷ್ಟು ಮಾಹಿತಿಯನ್ನು ಒದಗಿಸುತ್ತದೆ.[2] ಎಂದು ಅಭಿಪ್ರಾಯಪಟ್ಟಿದ್ದಾರೆ.

ಪ್ರಜಾಕೋಟಿಯ ಸೃಷ್ಟಿಯು ತನ್ನೊಬ್ಬನಿಂದ ಅಸಾಧ್ಯವೆಂಬುದನ್ನು ಮನಗಂಡ ಪ್ರಜಾಪತಿಯು 'ಉಷಸ್' ಎಂಬ ಸ್ತ್ರೀಯನ್ನು ಸೃಷ್ಟಿಸಿ ಅವಳೊಡನೆ ಬೆರೆತು ಜಗತ್ತನ್ನು ಸೃಷ್ಟಿಸಿದನೆಂದು ಪುರಾತನ ಸಾಹಿತ್ಯವಾದ ತೈತ್ತೀರಿಯ ಬ್ರಾಹ್ಮಣದಲ್ಲಿ ಹೇಳಲಾಗಿದೆ. ಹೀಗಾಗಿ ವಿಶ್ವಸೃಷ್ಟಿಯ ಸಂಕೇತವಾದ ಲಿಂಗದಲ್ಲಿ ಸ್ತ್ರೀ ಸಂಕೇತವಾದ ಯೋನಿಯನ್ನು (ಯೋನಿಪೀಠ) ಸೇರಿಸಲಾಯಿತು. 'ಲಿಂಗಮೀಶಮಯಂ ಪ್ರೋಕ್ತ ಯೋನಿಃ ಶಕ್ತಿಮಯಂಸ್ಮೃತಂ'– "ಲಿಂಗವೇ ಶಿವನೆಂತಲೂ, ಅದರ ಪೀಠವೇ (ಯೋನಿ) ಉಮೆಯೆಂತಲೂ, ಇದರ ಮಿಶ್ರಣದಿಂದ ಮಾತ್ರ ವಿಶ್ವಸೃಷ್ಟಿ ಎಂದೂ ಆಗಮಗಳ ಅಭಿಮತ."[3] ಕ್ರಿ.ಶ. 8–9 ನೆಯ ಶತಮಾನದ ವೇಳೆಗೆ ಆಗಮೋಕ್ತ ಲಿಂಗಗಳಲ್ಲಿ ಯೋನಿಪೀಠದ ಸೇರ್ಪಡೆಯನ್ನು ಕಾಣಬಹುದು. ಆನಂತರದ ಕಾಲದಲ್ಲಿ ಅಭಿಷೇಕಪ್ರಿಯ ಶಿವನ ಪರಿಕಲ್ಪನೆಯಲ್ಲಿ (ಈ ನಿಟ್ಟಿನಲ್ಲಿ ಲಕ್ಕಣ್ಣದಂಡೇಶನು ಶಿವತತ್ತ್ವಚಿಂತಾಮಣಿ ಯಲ್ಲಿ "ಅಲಂಕಾರಪ್ರಿಯೋ ವಿಷ್ಣುಃ ಜಲಧಾರಾಪ್ರಿಯಶ್ಶಿವಃ। ನಮಸ್ಕಾರಪ್ರಿಯೋ ಭಾನುಃ ಬ್ರಾಹ್ಮಣೋ ಭೋಜನಪ್ರಿಯಃ॥ ಎಂದು ಹೇಳಿರುವುದನ್ನು ಇಲ್ಲಿ ಸ್ಮರಿಸಬಹುದು) ಈ ಯೋನಿಪೀಠವು ಅಭಿಷೇಕ ಜಲವು ಹರಿಯುವ ಮಾರ್ಗವಾಗಿ ಬಳಕೆಯಾಗಿದೆ.[4] ಶಿವನನ್ನು ಅನೇಕ ರೂಪಗಳಲ್ಲಿ ಕಂಡಿರುವಂತೆ ಲಿಂಗರೂಪದಲ್ಲಿಯೂ ಕಾಣಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಅನೇಕ ವಾಸ್ತು ಗ್ರಂಥಗಳಲ್ಲಿ, ಮಹಾಕಾವ್ಯಗಳಲ್ಲಿ ಮತ್ತು ಪುರಾಣಗಳಲ್ಲಿ ಉಲ್ಲೇಖಗಳಿವೆ. ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಶೈವಧರ್ಮೀಯರು ಶಿವನನ್ನು ಲಿಂಗದ ರೂಪದಲ್ಲಿ ಪೂಜಿಸುತ್ತಾ ಬಂದಿದ್ದಾರೆ. ಲಿಂಗವೆಂಬ ಶಬ್ದಕ್ಕೆ 'ಚಿಹ್ನೆ', 'ಸಂಕೇತ', 'ಲಾಂಛನ' ಇತ್ಯಾದಿ ಅರ್ಥಗಳಿವೆ. ಅಥರ್ವವೇದದಲ್ಲಿ ಶಿವನ ಸಂಕೇತವಾಗಿ 'ಸ್ತಂಭ'ದ ಕಲ್ಪನೆ ಇದೆ. ಇಡೀ ಜಗತ್ತನ್ನು ನಿಲ್ಲಿಸಿರುವ ಆಧಾರ ಸ್ತಂಭವೇ 'ಲಿಂಗ'. ಪ್ರಪಂಚದಾದ್ಯಂತವೂ ವ್ಯಾಪಿಸಿ ಜಗತ್ತಿನ ಎಲ್ಲ ಅಂಗಗಳನ್ನು, ಅಂಶಗಳನ್ನು ಒಳಗೊಂಡಿರುವ ಅವ್ಯಕ್ತವಾದ ಆ ಪರಮೇಶ್ವರನ ಮೂರ್ತರೂಪವೇ 'ಲಿಂಗ'. ಈ 'ಲಿಂಗ'ದ ರೂಪದಲ್ಲಿಯೇ ಭೂಮಿ, ಆಕಾಶ, ಅಗ್ನಿ, ಸೂರ್ಯ, ಚಂದ್ರ, ವಾಯು, ಅಮೃತ, ಮೃತ್ಯು– ಹೀಗೆ ಎಲ್ಲವೂ ಇದರಲ್ಲಿ

ಅಡಗಿದೆ. ಸಮುದ್ರವೇ ನಾಡಿಗಳಾಗಿರುವ ಈ ಸ್ತಂಭವನ್ನು 'ಪುರುಷ' ನಂತೆ ಕಲ್ಪಿಸಿಕೊಳ್ಳಲಾಗಿದೆ.[5] ಲಿಂಗವೆಂದರೆ ಶಿಶ್ನವೆಂದೂ, ಅದು ಶಿವನ ಶಿಶ್ನವೆಂದೂ, ದೇವಾನುದೇವತೆಗಳು ಪೂಜಿಸಬೇಕೆಂದು ವಾಮನ ಪುರಾಣದಲ್ಲಿ ಹೇಳಲಾಗಿದೆ.[6] "ಋಗ್ವೇದದಲ್ಲಿ, 'ಶಿಶ್ನದೇವಾ'ಎಂಬ ಪದವಿದ್ದು, ಆರ್ಯೇತರ ಸಂಸ್ಕೃತಿಯವರು ಪುರುಷನ ಶಿಶ್ನವನ್ನೇ ದೇವರೆಂದು ಪೂಜಿಸುತ್ತಿದ್ದರೆಂಬುದು ತಿಳಿದುಬರುತ್ತದೆ." ಲಿಂಗ ಪುರಾಣದಲ್ಲಿ ಬರುವ –"ಲಿಂಗವೇದೀ ಮಹಾದೇವೀ ಲಿಂಗಂ ಸಾಕ್ಷಾನ್ಮಹೇಶ್ವರಃ" ಎಂಬ ಮಾತು ಇದಕ್ಕೆ ಪುಷ್ಟಿ ನೀಡುತ್ತದೆ. ಇದೇ ರೀತಿ ಶಿವಪುರಾಣದಲ್ಲಿಯೂ ಕೂಡ – "ಪೀಠಮಂಬಾಮಯಂ ಸರ್ವಂ ಶಿವಲಿಂಗಶ್ಚಚಿನ್ಮಯಃ" ಎಂದು ಹೇಳಲಾಗಿದೆ. ಶಿವನ ಸರ್ವವ್ಯಾಪಕತೆಯನ್ನು ಲಿಂಗದ ಮೂಲಕ ಸಂಕೇತಿಸಲು ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಎಂಬ ಐದು ಮುಖಗಳನ್ನು ಗುರುತಿಸಲಾಗಿದೆ.

'ಗೋಕರ್ಣ ಮಹಾತ್ಮೆ'ಯಲ್ಲಿ ಮಹಾಬಲೇಶ್ವರನ ಮಹಿಮೆಯನ್ನು ಸಾರುತ್ತಾ, ಗಣಪತಿಯು ನೆಲದ ಮೇಲೆ ಇಟ್ಟ ಲಿಂಗವನ್ನು ರಾವಣನು ಕೀಳಲಾಗದೇ ಕೋಪಗೊಂಡು ಆ ಲಿಂಗವನ್ನು ಇಟ್ಟುಕೊಂಡಿದ್ದ ಸಂಪುಟವನ್ನು ಉತ್ತರ ದಿಕ್ಕಿಗೆ ಎಸೆದನು. ಆಗ ಆ ಸಂಪುಟವು ಎರಡು ಯೋಜನ ದೂರದಲ್ಲಿ ಬಿದ್ದಿತು. ಆ ಸಂಪುಟವೇ 'ಸದ್ಯೋಜಾತ'ಲಿಂಗವಾಯಿತು. ಇದನ್ನು ಇಂದು 'ಸಜ್ಜೇಶ್ವರ' ಎಂದು ಕರೆಯಲಾಗಿದೆ. ದಕ್ಷಿಣಕ್ಕೆ ಎಸೆದಿದ್ದ ಸಂಪುಟದ ಮುಚ್ಚಳವು 'ವಾಮದೇವಲಿಂಗ'ವಾಗಿ 'ಗುಣವಂತೇಶ್ವರ' ಎನಿಸಿದೆ. ಸಂಪುಟಕ್ಕೆ ಕಟ್ಟಿದ್ದ ವಸ್ತ್ರದ ಪಿಂಡವು ಸಮುದ್ರದ ಮಧ್ಯದಲ್ಲಿ ಬಿದ್ದು 'ಅಘೋರೇಶ್ವರ'ನಾಗಿ 'ಅಮೃತೇಶ್ವರ'ನೆನಿಸಿದೆ. ಮತ್ತೆ ದಕ್ಷಿಣಕ್ಕೆ ಎಸೆದ ಅದರ ದಾರವೇ 'ತತ್ಪುರುಷ' ಲಿಂಗವಾಗಿ 'ಧಾರೇಶ್ವರ'ವಾಯಿತೆಂದು ಹೇಳಲಾಗಿದೆ. ಗೋಕರ್ಣದಲ್ಲಿ ಸ್ಥಾಪಿತವಾದ ಪ್ರಾಣಲಿಂಗವು ಈಶಾನವೆನಿಸಿದ್ದು, ಈ ಐದು ಪಂಚಬ್ರಹ್ಮಾತ್ಮಕವಾದ ಪಂಚಲಿಂಗಗಳೆನಿಸಿವೆ ಎಂದು ಹೇಳಲಾಗಿದೆ. ಸೃಷ್ಟಿ ಸಂಭವಿಸಿದಾಗ ಮೊದಲಿಗೆ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನವೆಂಬ ಅಕ್ಷಯ ಮುಖಗಳುಳ್ಳ ಸುಂದರವಾದ ದೇವನು ಜನಿಸಿದನು. ಕಲ್ಪಾಂತರದಲ್ಲಿ ಎಲ್ಲ ದೇವತೆಗಳು ಯಾವುದರಲ್ಲಿ ಲೀನವಾಗುತ್ತಾರೋ ಅದು 'ಲಿಂಗ'ವೆನ್ನಿಸಿತು. ಹೀಗೆ ಕಲ್ಪಾಂತರವಾದಾಗ, ಪ್ರಳಯಕಾಲದಲ್ಲಿ ಸರ್ವವೂ ನಾಶವಾದಾಗ ಸಾಗರದ ಮಧ್ಯೆ ಕ್ಷೇತ್ರಾಧಿಪನಾಗಿ 'ಅಕ್ಷಯಲಿಂಗ' ಉಳಿಯುತ್ತದೆ. ಅದೇ ಸರ್ವೇಶ್ವರನ ಪ್ರತೀಕವಾಗಿ ಎಲ್ಲೆಡೆ ಪೂಜೆಗೊಳ್ಳುತ್ತಿದೆ ಎಂಬ ಪ್ರತೀತಿ ಇದೆ.

ವೈದಿಕ ಧರ್ಮದಲ್ಲಿ ಲಿಂಗವು ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರ ಸಂಕೇತವಾಗಿದೆ. ಈ ಹಿನ್ನೆಲೆಯಲ್ಲಿ ಅಧಿಷ್ಠಾನವಿರುವ, ಚತುರ್ಭುಜದ ಆಕೃತಿಯನ್ನು ಹೊಂದಿರುವ ಲಿಂಗವನ್ನು 'ಬ್ರಹ್ಮಭಾಗ' ವೆಂದೂ, ಇದರ ಮೇಲಿರುವ ಅಷ್ಟಭುಜಾಕೃತಿಯ ಪಾಣಿಪೀಠವನ್ನು ಹೊಂದಿರುವುದನ್ನು 'ವಿಷ್ಣುಭಾಗ' ವೆಂದೂ, ಅದರ ಮಧ್ಯಭಾಗದಲ್ಲಿರುವುದನ್ನು 'ರುದ್ರಭಾಗ'ವೆಂದೂ ಮೂರು ಭಾಗಗಳಾಗಿ ಗುರುತಿಸಲಾಗಿದೆ. ವಿಷ್ಣುಭಾಗದ ಎಡ ಅಂಚಿನಲ್ಲಿ ಪ್ರನಾಳವಿರುತ್ತದೆ. ವೃತ್ತಾಕಾರವಾಗಿರುವ ಲಿಂಗದ ಭಾಗವನ್ನು 'ಶಿರೋವರ್ತಮ' ಎಂದು ಕರೆಯಲಾಗುತ್ತದೆ. ಪೂಜಿಸಲ್ಪಡುವ ಲಿಂಗದ ಮಧ್ಯಭಾಗದಲ್ಲಿ ಎರಡು ನೇರವಾದ ಗೆರೆಗಳ ಜೊತೆಗೆ ಎರಡೂ ಭಾಗದಲ್ಲಿ ಪಾರ್ಶ್ವರೇಖೆಗಳು ಕಂಡುಬರುತ್ತವೆ. ಇವುಗಳನ್ನು 'ಬ್ರಹ್ಮಸೂತ್ರ'ಗಳೆಂದು ಕರೆಯಲಾಗುತ್ತದೆ. ಇದರಲ್ಲಿರುವ ಲಿಂಗ ವೇದಿಯು ಪಾರ್ವತಿಯಾದರೆ, ಲಿಂಗವು ಪರಮೇಶ್ವರನ ಪ್ರತೀಕವಾಗಿದೆ. ಅಂದರೆ ಲಿಂಗವು ಶಿವಶಕ್ತಿಯರ ಸಂಗಮಸಂಕೇತವಾಗಿದೆ. ಮೈಸೂರು ಜಿಲ್ಲೆಯಲ್ಲಿರುವ ಶಿವದೇವಾಲಯಗಳಲ್ಲಿ ಅದರಲ್ಲೂ ಗಂಗರ

ಕಾಲದಲ್ಲಿ ನಿರ್ಮಾಣಗೊಂಡಿರುವ ದೇವಾಲಯಗಳಲ್ಲಿ ನಿರಾಕಾರ ರೂಪವಾದ ಲಿಂಗಗಳು ಮತ್ತು ಮುಖಲಿಂಗಗಳು ಕಂಡುಬರುತ್ತವೆ. ಇನ್ನು ಗಂಗರಕಾಲದ ದೇವಾಲಯಗಳಲ್ಲಿ ಪ್ರತಿಷ್ಠಾಪಿಸಲಾಗಿರುವ ಬಾಣದ ಆಕಾರವುಳ್ಳ ಬ್ರಹ್ಮಸೂತ್ರಗಳಿರುವ ಲಿಂಗಗಳನ್ನು ಮೈಸೂರು ಜಿಲ್ಲೆಯಲ್ಲಿ ಕಂಡುಬರುವ ಪ್ರಾಚೀನ ಲಿಂಗಗಳೆಂದು ಹೇಳಲಾಗಿದೆ.

ಆದರೆ ದಕ್ಷಿಣ ಭಾರತದಲ್ಲಿ ಮೌರ್ಯರ ನಂತರ ಕ್ರಿ.ಪೂ. 2 ನೆಯ ಶತಮಾನದಲ್ಲಿ ಸ್ವಾಯತ್ತತೆಯನ್ನು ಘೋಷಿಸಿಕೊಂಡ ಶಾತವಾಹನರು ಸ್ಥಳೀಯ ಸಾಮ್ರಾಜ್ಯವನ್ನು ಸ್ಥಾಪಿಸಿದ ಮೇಲೆ ಸನಾತನ ಶೈವಧರ್ಮವು ಉತ್ತುಂಗವನ್ನು ತಲುಪಿ ಅನೇಕ ಶೈವದೇವಾಲಯಗಳು ಮತ್ತು ಶಿವಲಿಂಗಗಳು ಸ್ಥಾಪನೆಯಾದ ಬಗ್ಗೆ ಶಾಸನಗಳಲ್ಲಿ ಉಲ್ಲೇಖವಿದೆ. ಕ್ರಿ.ಶ. 1 ನೆಯ ಶತಮಾನದಿಂದಲೇ ದೇವಾಲಯಗಳಲ್ಲಿ ಲಿಂಗಗಳನ್ನು ಪ್ರತಿಷ್ಠಾಪಿಸುವ ಪರಿಪಾಠ ಪ್ರಾರಂಭಗೊಂಡಿರುವುದು ಕಂಡುಬರುತ್ತದೆ. ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯ 'ಗುಡಿಮಲ್ಲಂ'ನ ಲಿಂಗವು ಲಿಂಗಾರಾಧನೆಗೆ ಪ್ರಾಚೀನವಾದ ಉದಾಹರಣೆಯೆಂದು ಹೇಳಲಾಗಿದೆ. "ಪ್ರಖ್ಯಾತ ಇತಿಹಾಸ ವಿದ್ವಾಂಸರಾದ ಟಿ.ಎ. ಗೋಪಿನಾಥರಾವ್ ಅವರು ಈ ಶಿಲ್ಪವನ್ನು ಬೆಳಕಿಗೆ ತಂದು, ಇದು ಕ್ರಿ.ಪೂ. 2 ನೆಯ ಶತಮಾನಕ್ಕೆ ಸೇರಿದ್ದೆಂದು ನಿಗದಿಪಡಿಸಿದ್ದಾರೆ." ಇಲ್ಲಿರುವ ಲಿಂಗವು ಸು. 1.54 ಮೀಟರ್ ಎತ್ತರವಿದ್ದು, ಇದನ್ನು ಅಗ್ನಿ ಶಿಲೆಯಿಂದ ನಿರ್ಮಿಸಿರುವುದಾಗಿ ಹೇಳಲಾಗಿದೆ. ಲಿಂಗದ ಮೇಲ್ಭಾಗದಲ್ಲಿ ಶಿಶ್ನದ ಪ್ರತಿರೂಪವನ್ನು (ಶಿಶ್ನದ ತಲೆಯಭಾಗ) ಸ್ಪಷ್ಟವಾಗಿ ತೋರಿಸಲಾಗಿದೆ. ಕರ್ನಾಟಕದ ಅಂಕೋಲ ತಾಲೂಕಿನ ಬೋಳೆಯಲ್ಲಿ ದೊರೆತಿರುವ ಲಿಂಗವು ವಿಶಿಷ್ಟವಾಗಿದ್ದು, ಇದರ ರುದ್ರಭಾಗವು ಪೂರ್ತಿ ವೃತ್ತಾಕಾರವಾಗಿರದೆ ಅಂಡಾಕಾರವಾಗಿದೆ. ಇದರ ಕಾಲವನ್ನು ಸುಮಾರು ಕ್ರಿ.ಶ.2–3 ನೆಯ ಶತಮಾನವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.[8]

ಆದರೆ ಕ್ರಿ.ಪೂ.2 ಮತ್ತು 1 ನೆಯ ಶತಮಾನದ ಪ್ರಾಚೀನ ಲಿಂಗರೂಪವೊಂದು ಅಲಹಬಾದಿನ ಸಮೀಪದಲ್ಲಿರುವ 'ಭಿಟಾ' ಎಂಬಲ್ಲಿ ದೊರೆತಿದ್ದು, ವಿದ್ವಾಂಸರಾದ ಆರ್.ಡಿ. ಬ್ಯಾನರ್ಜಿಯವರು ಈ ಲಿಂಗರೂಪವನ್ನು ಸವಿವರವಾಗಿ ಅಧ್ಯಯನ ಮಾಡಿದ್ದಾರೆ. ಸುಮಾರು 84 ಸೆಂ. ಮೀ. ಎತ್ತರವಿರುವ ಕಲ್ಲಿನ ಈ ಲಿಂಗಶಿಲ್ಪವು ಕ್ರಿ.ಪೂ 1 ನೆಯ ಶತಮಾನಕ್ಕೆ ಸೇರಿದ್ದೆನ್ನಲಾಗಿದೆ. ಈ ಲಿಂಗಾಕೃತಿಗೆ ನಾಲ್ಕೂ ದಿಕ್ಕುಗಳಲ್ಲಿ ನಾಲ್ಕು ಮಾನವ ಮುಖಗಳಿದ್ದು, ಮೇಲ್ಭಾಗದಲ್ಲಿ ಮತ್ತೊಂದು ಮಾನವನ ಮುಖವನ್ನು ಕಡೆಯಲಾಗಿದೆ. ವಿದ್ವಾಂಸರು ಈ ಶಿಲ್ಪವನ್ನು ಶಿವನ ಪಂಚಮುಖಗಳ ಕಲ್ಪನೆಯಿಂದ ನಿರೂಪಿಸಲಾಗಿರುವ ಪ್ರಾಚೀನ ಲಿಂಗವೆಂದು ಗುರುತಿಸಿದ್ದಾರೆ. ಖ್ಯಾತ ಕಲಾವಿಮರ್ಶಕರಾದ ಸಿ. ಶಿವರಾಮಮೂರ್ತಿಯವರ ಪ್ರಕಾರ ಈ ಶಿಲ್ಪವು ಅತಿ ಪ್ರಾಚೀನ ಶಿವಲಿಂಗ ರೂಪವಾಗಿದ್ದು, ಶಿವನ ಪಂಚಮುಖಲಿಂಗರೂಪವೂ ಆಗಿದೆ ಎಂದಿದ್ದಾರೆ. ಲಭ್ಯವಿರುವ ಈ ಪ್ರಾಚೀನ ಮುಖಲಿಂಗವನ್ನು ಲಕ್ನೋದ ವಸ್ತುಸಂಗ್ರಹಾಲಯದಲ್ಲಿ ಸಂರಕ್ಷಿಸಲಾಗಿದೆ. ಕ್ರಿ. ಶ. ಆರಂಭದ ಆಸುಪಾಸಿನಲ್ಲಿ ಆಳಿದ ಯೌದೇಹ್ಯ, 'ಕುಶಾಣ' ಮತ್ತು 'ಔದುಂಬರ' ರ ನಾಣ್ಯಗಳ ಮೇಲೆ ಶಿವಲಿಂಗದ ಆಕೃತಿಗಳು ಚಿತ್ರಿತವಾಗಿರುವುದನ್ನು ಸಂಶೋಧಕರು ಗುರುತಿಸಿದ್ದಾರೆ. ಎಂದು ವಿದ್ವಾಂಸರಾದ ಸಿ. ಶಿವಮೂರ್ತಿಯವರು ಹೇಳಿದ್ದಾರೆ.

ಲಿಂಗಗಳನ್ನು ಚಲಲಿಂಗ ಮತ್ತು ಅಚಲಲಿಂಗ ಎಂದು ಎರಡು ವಿಧಗಳಲ್ಲಿ ವಿಂಗಡಿಸಲಾಗಿದೆ. ಚಲಲಿಂಗಗಳೆಂದರೆ ಚಲಿಸಬಹುದಾಂತಹ ಅಂದರೆ ಮಾನವನು ಒಂದು ಕಡೆಯಿಂದ ಮತ್ತೊಂದು ಕಡೆಗೆ ತೆಗೆದುಕೊಂಡು ಹೋಗಬಹುದಾದಂತಹ ಲಿಂಗಗಳು. ಇವುಗಳನ್ನು ಮೃಣ್ಮಯ, (ಹಸಿಯ ಜೇಡಿ

ಮಣ್ಣಿನಿಂದ ಅಥವಾ ನದೀತೀರದ ಮರಳಿನಿಂದ ಮಾಡಿ ಪುಜಿಸುತ್ತಿದ್ದ ಲಿಂಗಗಳು) ಲೋಹಜ, (ಚಿನ್ನ, ಬೆಳ್ಳಿ, ತಾಮ್ರ, ಪಂಚಲೋಹ, ಸೀಸ, ತಗಡು ಮುಂತಾದ ಲೋಹಗಳಿಂದ ಮಾಡಿ ಪೂಜಿಸುತ್ತಿದ್ದ ಚಿಕ್ಕ ಲಿಂಗಗಳು) ರತ್ನಜ, (ಮುತ್ತು, ಹವಳ, ಶಂಖ, ವೈಢೂರ್ಯ, ಪುಷ್ಯರಾಗ, ಪಚ್ಚೆ, ನೀಲಮಣಿ ಮುಂತಾದವುಗಳಿಂದ ನಿರ್ಮಿಸಿ ಪೂಜಿಸುತ್ತಿದ್ದ ಲಿಂಗಗಳು) ದ್ವಾರಜ, (ಶಮಿ, ಮಧೂಕ, ಕರ್ಣಿಕಾರ, ಮಂಡೂಕ, ಅರ್ಜುನ, ಪಿಪ್ಪಲ, ಔದುಂಬರ ಮೊದಲಾದ ಮರಗಳಿಂದ ಮಾಡಿದ ಲಿಂಗಗಳು) ಶೈಲಜ (ಕಲ್ಲಿನಿಂದ ಮಾಡಿದ ಚಿಕ್ಕ ಚಿಕ್ಕ ಲಿಂಗಗಳು ಇವುಗಳು ವೀರಶೈವ ಲಿಂಗಾಯತರು ತಮ್ಮ ದೇಹದ ಮೇಲೆ ಧರಿಸುವಂಥವು) ಮತ್ತು ಕ್ಷಣಿಕ (ಮರಳು, ಅಕ್ಕಿ, ಅನ್ನ, ಗಂಧ, ರುದ್ರಾಕ್ಷಿ, ಬೆಣ್ಣೆ, ಕೂರ್ಚಾ(ಹುಲ್ಲು) ಸೆಗಣಿ, ಹಿಟ್ಟು ಮತ್ತು ಹೂವಿನಿಂದ ಮಾಡಿದ ಲಿಂಗಗಳು) ಎಂದು ಐದು ಭಾಗಗಳಾಗಿ ವಿಂಗಡಿಸಲಾಗಿದೆ.

ಅಚಲಲಿಂಗಗಳು ಚಲಿಸಲಾರದಂತಹ ಲಿಂಗಗಳು. ಇವುಗಳನ್ನು ದೇವಾಲಯಗಳಲ್ಲಿ ಪ್ರತಿಷ್ಠಾಪಿಸಲಾಗುತ್ತದೆ. ಇವು ಲೋಕ ಕಲ್ಯಾಣದ ಉದ್ದೇಶದಿಂದ ಸ್ಥಾಪಿಸಲಾದ ಲಿಂಗಗಳಾಗಿವೆ. ಲಿಂಗ ಸ್ಥಾಪನೆಯಿಂದ ಮೋಕ್ಷ ಪ್ರಾಪ್ತಿಯಾಗುತ್ತದೆಂಬ ನಂಬಿಕೆಯಿಂದ ಲಿಂಗಸ್ಥಾಪನೆಯನ್ನು ಮಾಡಲಾಗುತ್ತಿತ್ತು. ಹೀಗಾಗಿ ಕರ್ನಾಟಕದಲ್ಲಿ ಅಪಾರ ಸಂಖ್ಯೆಯ ಶಿವಾಲಯಗಳು ನಿರ್ಮಾಣಗೊಂಡಿರುವುದಲ್ಲದೆ ವಿವಿಧ ಹೆಸರಿನ ಲಿಂಗಗಳೂ ಸ್ಥಾಪನೆಯಾಗಿರುವುದನ್ನು ಕಾಣಬಹುದು. ಉದಾಹರಣೆಗೆ: ಬೂಚೇಶ್ವರ, ಬಿಟ್ಟೇಶ್ವರ, ಗೊಜ್ಜೇಶ್ವರ ಇತ್ಯಾದಿ. ಹಾಗೆಯೇ ಕ್ರಿ.ಶ. 11–12 ನೆಯ ಶತಮಾನದಲ್ಲಿ ಕಾಳಾಮುಖ ಶೈವರ ಪ್ರಭಾವದಿಂದ ಬೇರೆ ಬೇರೆ ಜಾತಿಯವರು ಶೈವರಾಗಿ ತಮ್ಮ ಗುಂಪಿಗೆ ಪ್ರತ್ಯೇಕ ಶಿವಾಲಯಗಳನ್ನು ನಿರ್ಮಿಸಿಕೊಂಡರು. ಹೀಗಾಗಿ ಕಮರೇಶ್ವರ, ಬಿಲ್ಲೇಶ್ವರ, ಗವರೇಶ್ವರ ಇತ್ಯಾದಿ ಹೆಸರಿನ ಶಿವಾಲಯಗಳು ನಿರ್ಮಾಣಗೊಂಡವು. ಇದರಿಂದಾಗಿ ಲಿಂಗವು 'ನಿರ್ವಿಕಾರ'ವೆಂದು ಹೇಳಲಾಗಿದ್ದರೂ ಕೂಡ ವಿವಿಧ ಪ್ರಕಾರದ ಲಿಂಗಗಳನ್ನು ದೇವಾಲಯಗಳಲ್ಲಿ ಕಾಣಬಹುದಾಗಿದೆ. ಅಚಲಲಿಂಗಗಳಲ್ಲಿ 1.ಸ್ವಯಂಭುವ 2.ಬಾಣಲಿಂಗ 3.ದೈವಿಕ 4.ಆರ್ಷಕ 5.ಗಾಣಪತ್ಯ 6.ಮಾನುಷಲಿಂಗಗಳೆಂದು ಆರು ವಿಧದ ಲಿಂಗಗಳನ್ನು ಹೆಸರಿಸಲಾಗಿದೆ. ಆದರೆ ಸುಪ್ರಬೇಧಾಗಮದಲ್ಲಿಯೂ ಇದರ ಉಲ್ಲೇಖವಿದ್ದು, ಇದರಲ್ಲಿ ಸ್ವಯಂಭು, ಪೂರ್ವ, ದ್ವಾದಶ, ಗಾಣಪತ್ಯ, ಅಸುರ, ಸುರ, ಅರ್ಷ, ರಾಕ್ಷಸ, ಮಾನುಷ ಮತ್ತು ಬಾಣ ಎಂಬುದಾಗಿ ಒಂಬತ್ತು ವಿಧಗಳಿವೆ.[9] ಇವುಗಳಲ್ಲಿ ಸ್ವಯಂಭುವ ಲಿಂಗಗಳು ಅತ್ಯಂತ ಮಹತ್ವವನ್ನು ಪಡೆದಿವೆ.

ಇವುಗಳಲ್ಲದೆ 'ಸಕಲಲಿಂಗ' ಮತ್ತು 'ಉದ್ಭವಲಿಂಗ'ಳೆಂಬುದಾಗಿ ಮತ್ತೆರಡು ಬಗೆಗಳಿವೆ. ಇವು ಮೈಸೂರು ಜಿಲ್ಲೆಯ ಸರಗೂರು, ಟಿ. ನರಸೀಪುರ ತಾಲೂಕಿನ ವಿಜಯಪುರ, ಮುಡುಕುತೊರೆ ಮುಂತಾದ ಕಡೆಗಳಲ್ಲಿರುವ ಶಿವಾಲಯಗಳಲ್ಲಿ ಕಂಡುಬರುತ್ತವೆ. ಹಾಗೆಯೆ ಪ್ರಕೃತಿ ಸಹಜವಾಗಿ ರೂಪಿತವಾದ 'ಸ್ವಯಂಭುವ' ಅಥವಾ 'ಉದ್ಭವಲಿಂಗ' ಎಂಬ ಮತ್ತೊಂದು ಪ್ರಕಾರವಿದ್ದು, ಇವುಗಳಿಗೆ ನಿಶ್ಚಿತವಾದ ಆಕಾರಗಳಿರುವುದಿಲ್ಲ. ಇವುಗಳ ಆಕಾರವನ್ನು ಯಾವುದೇ ಕಾರಣಕ್ಕೂ ಬದಲಾಯಿಸಬಾರದೆಂದು ಆಗಮದಲ್ಲಿ ಹೇಳಲಾಗಿದೆ.[10] ಡಾ. ಎಂ. ಚಿದಾನಂದ ಮೂರ್ತಿಯವರು ತಮ್ಮ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಸಂಶೋಧನಾ ಪ್ರಬಂಧದಲ್ಲಿ 'ಪಂಚಮುಖಿಲಿಂಗ' ಎಂಬ ಮತ್ತೊಂದು ಬಗೆಯನ್ನು ಹೆಸರಿಸಿದ್ದಾರೆ. 'ಏಕಮುಖಲಿಂಗ' ಎಂಬ ಇನ್ನೂ ಒಂದು ಬಗೆಯಿದ್ದು, ಇದುವರೆಗೂ ಅದು ಲಭ್ಯವಾಗಿಲ್ಲ. ಇದನ್ನು ಒಂದು ಸಾವಿರ ವರ್ಷಗಳಿಗಿಂತಲೂ ಪುರಾತನವಾದ ಅಪರೂಪದ ಲಿಂಗ ಮಾದರಿ ಎಂದು ಹೇಳಲಾಗಿದೆ.

ಭಾರತದಲ್ಲಿರುವ 'ದ್ವಾದಶ ಜ್ಯೋತಿರ್ಲಿಂಗ' ಗಳು ಪ್ರಾಚೀನ ಕಾಲದಿಂದಲೂ ಶ್ರೇಷ್ಠತೆಯನ್ನು ಸಾರುತ್ತಾ ಬಂದಿವೆ. 1.ಸೌರಾಷ್ಟ್ರದ ಸೋಮನಾಥ 2.ನಾಸಿಕದ ತ್ರಯಂಬಕೇಶ್ವರ 3.ನರ್ಮದಾನದೀ ತೀರದ ಓಂಕಾರದ(ಮುಮ್ಮಲೇಶ್ವರ) ಓಂಕಾರೇಶ್ವರ 4.ಉಜ್ಜೈನಿಯ ಮಹಾಕಾಲೇಶ್ವರ 5.ಹಿಮಾಲಯದ ಕೇದಾರದ ಕೇದಾರೇಶ್ವರ 6. ವಾರಣಾಸಿಯ ವಿಶ್ವನಾಥ 7. ಪರ್ಲಿ(ಪರೇಲಿ)ಯ ವೈದ್ಯನಾಥ 8.ರಾಮೇಶ್ವರದ ರಾಮನಾಥ 9.ಶ್ರೀಶೈಲದ ಮಲ್ಲಿಕಾರ್ಜುನ 10.ದ್ವಾರಕಾನಗರದ ನಾಗನಾಥ 11. ಜ್ಯೋತಿಷ್ಕಪುರದ ಗುಹೇಶ್ವರ 12. ಮಹಾರಾಷ್ಟ್ರದ ಭೀಮಾನದಿ ತೀರದ ಭೀಮಾಶಂಕರ–ಇವು ದ್ವಾದಶಜ್ಯೋತಿರ್ಲಿಂಗಗಳು. ಸಾಮಾನ್ಯವಾಗಿ ಇವೆಲ್ಲವೂ ಸ್ವಯಂಭೂ ಅಥವಾ ಆಕರ್ಷಕ ಲಿಂಗಗಳಾಗಿವೆ. ಎಂಬುದಾಗಿ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಕ್ರಿ.ಪೂ 2ನೆಯ ಶತಮಾನದಲ್ಲಿಯೇ ಪ್ರವರ್ದಮಾನಕ್ಕೆ ಬಂದ ಶಾತವಾಹನರು ಹಲವಾರು ಶಿವಾಲಯಗಳನ್ನು ನಿರ್ಮಿಸಿ ಲಿಂಗಗಳನ್ನು ಪ್ರತಿಷ್ಠಾಪಿಸಿರುವ ಬಗ್ಗೆ ಶಾಸನಗಳಲ್ಲಿ ಉಲ್ಲೇಖವಿದೆ. ಹಾಗೆಯೇ ಕ್ರಿ.ಶ. 10–12 ನೆಯ ಶತಮಾನಗಳಲ್ಲಿ ಕರ್ನಾಟಕದಲ್ಲಿ ಪ್ರಬಲವಾಗಿದ್ದ ಕಾಳಾಮುಖಯತಿಗಳ ಪ್ರೇರಣೆಯಿಂದ ಕನ್ನಡನಾಡಿನಾದ್ಯಂತ ನೂರಾರು ಶಿವದೇವಾಲಯಗಳು ನಿರ್ಮಾಣಗೊಂಡು ಅವುಗಳಲ್ಲಿ ವೈವಿಧ್ಯಮಯವಾದ ಲಿಂಗಗಳು ಪ್ರತಿಷ್ಠಾಪನೆಯಾಗಿರುವುದನ್ನು ಕಾಣಬಹುದಾಗಿದೆ. **"**ಒಟ್ಟಾರೆಯಾಗಿ ಭಾರತೀಯ ಶಿಲ್ಪಕಲೆಯು ಇತರ ದೇಶಗಳಂತೆ ಕಲೆ ಮತ್ತು ಸೌಂದರ್ಯೋಪಾಸನೆಯ ಪ್ರತೀಕಗಳು ಮಾತ್ರವಾಗಿರದೆ, ಭಾರತೀಯ ಬದುಕಿನ ಬೆನ್ನೆಲುಬಾದ ಧಾರ್ಮಿಕತೆಯ ಸಿಂಚನದೊಂದಿಗೆ ಮೈತಳೆದಿದೆ**"**.[11]

**ಕೊನೆಟಿಪ್ಪಣಿಗಳು**


1. ಗೋಪಿನಾಥರಾವ್ ಟಿ. ಎ. *ಎಲಿಮಿನೆಟ್ಸ್ ಆಫ್ ಹಿಂದೂ ಐಕೆನೋಗ್ರಫಿ.* ಸಂಪುಟ–1, ಪುಟ. 2
2. ಮಾರ್ಗಬಂಧು. *ಲೆಕ್ಚೆರರ್ ಆನ್ ಸಂಘೋಲ್ ಎಸ್ಕವೇಷನ್.* ಯೂನಿವರ್ಸಿಟಿ ಆಫ್ ಮೈಸೂರು.
3. ಮೈಸೂರು ನಾಗರಾಜ ಶರ್ಮಾ. *ಹೊಯ್ಸಳ ಶಿಲ್ಪದಲ್ಲಿ ಶಿವ.* ಪುಟ. 222
4. ಅದೇ. ಪುಟ.222
5. ರಾಮಚಂದ್ರರಾವ್ ಎಸ್.ಕೆ. *ಅಥರ್ವವೇದ–10.7, 15, ಮೂರ್ತಿಶಿಲ್ಪ ನೆಲೆ ಹಿನ್ನೆಲೆ.* ಪುಟ. 104
6. ಪಂಡರೀನಾಥ ಚಾರ್ಯ ಗಲಗಲಿ. *ಕನ್ನಡ ವಾಮನ ಪುರಾಣ, ಅಧ್ಯಾಯ 6, ಶ್ಲೋಕ 126.* ಪುಟ. 53–56
7. ಕಡಪಟ್ಟಿ. ಎಮ್. ಎನ್. *ಪ್ರಾಚೀನ ಕರ್ನಾಟಕದಲ್ಲಿ ಶೈವಧರ್ಮ.* ಪುಟ. 129
8. ಸುಂದರ.ಅ. (1975). *ಜರ್ನಲ್ ಆಫ್ ಕರ್ನಾಟಕ ಯೂನಿವರ್ಸಿಟಿ ಸೋಷಿಯಲ್ ಸೈನ್ಸ್,*
9. ಗೋಪಿನಾಥರಾವ್, ಟಿ.ಎ. *ಎಲಿಮೆಂಟ್ಸ್ ಆಫ್ ಹಿಂದೂ ಐಕೊನೋಗ್ರಫಿ. ಸಂ*.2, ಬಾಗ–1. ಪುಟ.79
10. ರಾಮಚಂದ್ರರಾವ್, ಎಸ್. ಕೆ., *ಮೂರ್ತಿಶಿಲ್ಪ ನೆಲೆ ಹಿನ್ನೆಲೆ.* ಪುಟ–116
11. ಮೈಸೂರು ನಾಗರಾಜ ಶರ್ಮಾ, ಎಂ. *ಹೊಯ್ಸಳ ಶಿಲ್ಪದಲ್ಲಿ ಶಿವ.* ಪುಟ. 329